# ಬಿಪಾಸಾ ರಾಜಿ!

ಬುದ್ಧಿವಂತೆ ಬಿಪಾಸಾ. ಬಾಲಿವುಡ್‌ನಲ್ಲಿ ಏನೆಲ್ಲ ಪೈಪೋಟಿ ಇದ್ದರೂ ಎಲ್ಲರೊಂದಿಗೆ ಚೆನ್ನಾಗಿರುವ ಕಲೆ ಈಕೆಗೆ ಕರತಲಾಮಲಕ. ಹಾಗಾಗಿಯೇ ಆಕೆ ಇವತ್ತಿಗೂ ಜನಪ್ರಿಯ ತಾರೆಯಾಗಿಯೇ ಉಳಿದಿದ್ದಾರೆ. ಎಲ್ಲ ಕ್ಯಾಂಪ್‌ಗಳಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ.

ಬಾಯ್‌ಫ್ರೆಂಡ್ ಜಾನ್ ಅಬ್ರಹಾಂ ಜತೆಗೆ ಬಿಪಾಸಾಗೆ ಜಗಳ ಆಯಿತು ಎಂದಾರೋ ಸುದ್ದಿ ಹಬ್ಬಿಸಿದರು. ಅದು ನಿಜ ಕೂಡಾ ಆಗಿತ್ತು. ಆದರೆ ತಿಂಗಳಲ್ಲೇ ಬಿಪಾಸಾ ಗೆಳೆಯನ ಜತೆಗೆ ಸಂಬಂಧ ಸರಿ ಮಾಡಿಕೊಂಡಳು. ಬಾಲಿವುಡ್‌ನಲ್ಲಿ ಸಾಮಾನ್ಯವಾಗಿ ಆಗುವಂತೆ ಇನ್ನೊಬ್ಬ ಹುಡುಗಿ ತಮ್ಮ ಮಧ್ಯೆ ಬರಲು ಬಿಡಲಿಲ್ಲ!

ಕರೀನಾ ಕಪೂರ್ ಜತೆ ಬಿಪಾಸಾ ಸಂಬಂಧ ಹಳಸಿತ್ತು. ಬಿಪಾಸಾಳನ್ನು ಕಂಡರೆ ಕರೀನಾ ಕೆಂಡ ಕಾರುತ್ತಿದ್ದಳು. ಇತ್ತೀಚೆಗೆ ನೇರ ಕರೀನಾ ಬಳಿಗೇ ತೆರಳಿದ ಬಿಪ್ಸ್ ನಕ್ಕು ಕೈಕುಲುಕಿ ಫ್ರೆಂಡ್‌ಶಿಪ್ ಸರಿ ಮಾಡಿಕೊಂಡಳು.

ಈಗ ಸಲ್ಮಾನ್ ಖಾನ್ ಸರದಿ. ಐದು ವರ್ಷಗಳ ಹಿಂದೆ 'ನೋ ಎಂಟ್ರಿ' ಸಿನಿಮಾ ಶೂಟಿಂಗ್ ವಿಷಯದಲ್ಲಿ ಸಲ್ಮಾನ್ ಖಾನ್ ಮತ್ತು ಜಾನ್ ಅಬ್ರಹಾಂ ಮಧ್ಯೆ ವಾಗ್ಯುದ್ಧ ನಡೆದಿತ್ತು. ಬಿಪಾಸಾ ಗೆಳೆಯನ ಬೆನ್ನಿಗೆ ನಿಂತು ನಿರ್ಮಾಪಕರ ಬಳಿ ದೂರು ನೀಡಿದ್ದಳು. ಅಲ್ಲಿಂದಾಚೆಗೆ ಸಲ್ಮಾನ್‌ಗೆ ಬಿಪಾಸಾಳನ್ನು ಕಂಡರೆ ಆಗುತ್ತಿರಲಿಲ್ಲ. ವಾರಗಳ ಹಿಂದೆ ಕೊಲಂಬೋದಲ್ಲಿ ಐಫಾ ಚಿತ್ರೋತ್ಸವ ನಡೆದಾಗ ಬಿಪಾಸಾ ಸಲ್ಮಾನ್ ಜತೆಗೂ ರಾಜಿಯಾಗಿರುವ ಸುದ್ದಿ ಬಂದಿದೆ. ಸಲ್ಮಾನ್ ಉತ್ಸವದ ಮೂರೂ ದಿನ ತಾನು ಉಳಿದುಕೊಂಡಿದ್ದ ಹೋಟೆಲ್‌ನಲ್ಲಿ ಗೆಳೆಯರಿಗೆ ಪಾರ್ಟಿ ಇಟ್ಟುಕೊಂಡಿದ್ದನಂತೆ. ಮೊದಲ ದಿನದ ಪಾರ್ಟಿಗೆ ತೆರಳಿದ ಬಿಪಾಸಾ ನೇರವಾಗಿ ಸಲ್ಮಾನ್ ಬಳಿ ತೆರಳಿ ಕೈಕುಲುಕಿ ನೈಸ್ ಮಾಡಿಕೊಂಡಳಂತೆ. ಎರಡನೇ ದಿನವೂ ಪಾರ್ಟಿಗೆ ತೆರಳಿದಾಗ ಸಲ್ಮಾನನೇ ಮುಂದೆ ಬಂದು ಸ್ವಾಗತಿಸಿದನಂತೆ.

ಪತ್ರಕರ್ತರು ಕೇಳಿದರೆ, ಬುದ್ಧಿವಂತೆ ಬಿಪಾಸಾ– 'ಹಂಗೇನೂ ಇಲ್ಲಪ್ಪಾ.. ನಮ್ಮ ನಡುವೆ ಯಾವ ಭಿನ್ನಾಭಿಪ್ರಾಯವೂ ಇರಲಿಲ್ಲ..' ಎಂದಳಂತೆ!



# ಚಾಲಾಕಿ ಲಾರಾ



ಕೊಲಂಬೋದಲ್ಲಿ ನಡೆದ ಐಫಾ ಚಿತ್ರೋತ್ಸವದಿಂದ ಬಂದಿರುವ ಇನ್ನೊಂದು ಸುದ್ದಿ ಸ್ವಾರಸ್ಯಕರವಾಗಿದೆ. ಉತ್ಸವದ ಅಂಗವಾಗಿ ರಾತ್ರಿ ಏರ್ಪಡಿಸಿದ್ದ ಫ್ಯಾಶನ್ ಷೋನಲ್ಲಿ ಲಾರಾ ದತ್ತಾ ಡೀಪ್ ನೆಕ್ ಇರುವ ಗೋಲ್ಡನ್ ಬಣ್ಣದ ಗೌನ್ ಉಟ್ಟು ಕ್ಯಾಟ್‌ವಾಕ್ ಮಾಡಿದಳಂತೆ. ಆದರೆ ಒಮ್ಮೆಲೆ ಉಟ್ಟಿದ್ದ ಗೌನ್ ಕತ್ತಿನಿಂದ ಕೆಳಗೆ ಜಾರತೊಡಗಿತಂತೆ. ಚಾಲಾಕಿ ಲಾರಾ ತಕ್ಷಣ ಎಚ್ಚತ್ತು ಎರಡೂ ಕೈಗಳಲ್ಲಿ ಗೌನ್ ಜಾರದಂತೆ ಮುದ್ದೆ ಹಿಡಿದು, ಏನೂ ಆಗದವಳಂತೆ ಸೈಡ್‌ವಿಂಗ್ ಕಡೆಗೆ ನಡೆದಳಂತೆ. ಸಂಘಟಕರು ಲಾರಾಳ ಸಮಯಾವಧಾನತೆಗೆ ಭೇಷ್ ಎಂದಿದ್ದಾರೆ! ಎಷ್ಟೆಂದರೂ ಒರಿಜಿನಲ್ ಮಾಡೆಲ್ ತಾನೆ?

■ ಬಿಂದು

# ಅಮೀರ್ ತಲೆನೋವು

ಅಮೀರ್ ಖಾನ್ ಪ್ರೊಡಕ್ಷನ್ ಕಚೇರಿಗೆ ಒಂದೇ ಸಮನೆ ಚಿತ್ರಕಥೆಗಳ ದಾಳಿ ನಡೆದಿದೆಯಂತೆ. ತಮ್ಮ ಚಿತ್ರಕಥೆಯನ್ನು ಅಮೀರ್ ಸಂಸ್ಥೆ ಸಿನಿಮಾ ಮಾಡಲಿ ಎಂದು ಬಯಸಿ ಪ್ರತಿದಿನ ಏನಿಲ್ಲವೆಂದರೂ 8–10 ಜನ ಚಿತ್ರಕಥೆಗಳನ್ನು ಕಳುಹಿಸುತ್ತಿದ್ದಾರಂತೆ. ಎಲ್ಲವನ್ನೂ ಓದಲಾಗದೆ, ಅಮೀರ್ ಕಚೇರಿಯ ಸಹಾಯಕರ ಸ್ಕ್ರೀನಿಂಗ್ ಸಮಿತಿಯೊಂದನ್ನು ಮಾಡಿದ್ದು ಅವರು ಮೊದಲ ಹಂತದ ಓದು ನಡೆಸಿ ಹಲವನ್ನು ತಿರಸ್ಕರಿಸಿದ್ದಾರಂತೆ!

ಸದ್ಯಕ್ಕಂತೂ ಅಮೀರ್ ಬ್ಯುಸಿ. ಅನೂಷಾ ರಿಜ್ವಿ ನಿರ್ಮಾಣದ 'ಪೀಪಿ ಲೈವ್',ಪತ್ನಿ ಕಿರಣ್ ರಾವ್ ನಿರ್ದೇಶನದ 'ದೋಬಿ ಘಾಟ್' ಮತ್ತು ಅಭಿನಯ್ ಡಿಯೊ ಅವರ 'ಡೆಲ್ಲಿ ಬೆಲ್ಲಿ' ಚಿತ್ರಗಳಲ್ಲಿ ಅಮೀರ್ ಬ್ಯುಸಿ. ಕಥೆಗಾರರು ಒಂದೆರಡು ವರ್ಷಗಳಾದರೂ ಕಾಯಬೇಕು.

